# ಇಗಾ ಈಗ ನಂಬರ್ 1

**ಅಮೆರಿಕ ಓಪನ್ ಸಿಂಗಲ್ಸ್ ಟೆನಿಸ್ ಚಾಂಪಿಯನ್‌ಷಿಪ್ ಗೆದ್ದ ಪೋಲೆಂಡ್‌ನ ಮೊದಲ ಹೆಣ್ಣುಮಗಳು ಎನ್ನುವ ಸಾಧನೆ ಇಗಾ ಸ್ವಟೆಕ್ ಅವರದಾಗಿದೆ. ಅಂಗಳದ ತುಂಬೆಲ್ಲ ಆಟದ ವೈಖರಿಯ ಝಲಕ್‌ಗಳನ್ನು ಹರಿಬಿಡುವ ಚಿಗರೆಯಂತಹ ಚಲನೆಯ ಈ ಹುಡುಗಿಯ ಪ್ರಗತಿಯ ಗ್ರಾಫ್ ಮಜವಾಗಿದೆ.**

■ **ವಿಶಾಖ ಎನ್.**



ಪರ್ಲ್ ಜಾಮ್, ಪಿಂಕ್ ಫ್ಲಾಯಿಡ್, ರೆಡ್ ಹಾಟ್ ಚಿಲ್ಲಿ ಪೆಪ್ಪರ್ಸ್ ತರಹದ ಬ್ಯಾಂಡ್‌ಗಳು ಸಿದ್ಧಪಡಿಸಿರುವ ರಾಕ್ ಸಂಗೀತವನ್ನು ಕೇಳಿಕೊಂಡೇ ಪೋಲೆಂಡ್‌ನ ಇಗಾ ಸ್ವಟೆಕ್ ಟೆನಿಸ್ ಅಂಗಳಕ್ಕೆ ಪಂದ್ಯವಾಡಲು ಇಳಿಯುವುದು. ಕೋರ್ಟ್‌ನ ಕೋನ ಕೋನಗಳಲ್ಲೂ ಅವರ ಪಾದರಸದಂತಹ ಚಲನೆ ನೋಡಿದರೆ ಈ ರಾಕ್ ಸಂಗೀತದ ಹಂಗು ಮೂಡಿಸಿದ ಲಯ ಅಂದಾಜಿಗೆ ಸಿಕ್ಕೀತು. ಆದರೆ, ಎದುರಾಳಿ ಆಟಗಾರ್ತಿಯರಿಗೆ ಇಗಾ ಸ್ವಟೆಕ್ ಆಟ ಪದೇ ಪದೇ ಕೊಡುತ್ತಿರುವುದು ಶಾಕ್.

ದ್ರಾಕ್ಷಿ ಗೊಂಚಲುಗಳಿಗೆ ಲ್ಯಾಟಿನ್‌ನಲ್ಲಿ 'ಗ್ರ್ಯಾಪ್ಪಾ' ಎನ್ನುತ್ತಾರೆ. ಸ್ವಟೆಕ್ ಮುದ್ದಿನಿಂದ ಸಾಕಿರುವ ಕಪ್ಪು ಬಣ್ಣದ ಬೆಕ್ಕಿಗೂ ಅದೇ ಹೆಸರಿಟ್ಟಿದ್ದಾರೆ. ಅವರು ಬೆಕ್ಕನ್ನು ಕೊಂಡು ತರುವಾಗ ಅದು ಹೆಣ್ಣೇ ಆಗಬೇಕು ಎಂದು ಕೇಳಿದ್ದೂ ತಮ್ಮ ಉತ್ಸಾಹ ಇಮ್ಮಡಿಗೊಳಿಸಿಕೊಳ್ಳುವ ಸಂಕೇತವೆಂದೇ ಭಾವಿಸಿದ್ದರು.

ಅಮೆರಿಕ ಓಪನ್ ಗ್ರ್ಯಾನ್ ಸ್ಲ್ಯಾಮ್‌ನಲ್ಲಿ ಟ್ಯುನಿಷಿಯಾದ ಆನ್ಸ್ ಜಬೇರ್ ಅವರನ್ನು 6–2, 7–6 (7–5) ಅಂದುಕೊಂಡಷ್ಟು ಅಲ್ಲವಾದರೂ, ಸುಲಭವಾಗಿಯೇ ಮಣಿಸಿದರೆನ್ನಬೇಕು. ಒಂದು ಏಸ್ ಕೂಡ ಸೇರಿದ್ದ ಅವರ ಮೊದಲ ಸರ್ವ್‌ಗಳು ಶೇ. 79ರಷ್ಟು ಪಾಯಿಂಟ್‌ಗಳನ್ನು ತಂದಿತ್ತಿದ್ದು ಆಟದ ಮೇಲೆ ಅವರಿಗಿದ್ದ ಹಿಡಿತಕ್ಕೆ ಸಾಕ್ಷಿ.

ತಂದೆ ಥಾಮಸ್ ಮೆಕಿ ಸ್ವಟೆಕ್ ಇಗಾಳ ತಂದೆ. ಅವರು ರೋವರ್. 1988ರ ಸಿಯೋಲ್ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಿದ್ದವರು. ಹೀಗಾಗಿ ಇಗಾ ರಕ್ತದಲ್ಲೇ ಕ್ರೀಡೆಯ ಉತ್ಕಟತೆ ಬೆರೆತುಕೊಂಡಿದೆ. ಇಗಾಗೆ ಮೂರು ವರ್ಷ ಹಿರಿಯಳಾದ ಅಕ್ಕ ಇದ್ದಾಳೆ. ಅವಳ ಹೆಸರು ಅಗತಾ. ತಮ್ಮ ಇಬ್ಬರೂ ಹೆಣ್ಣುಮಕ್ಕಳು ಅಥ್ಲೀಟ್‌ಗಳಾಗಬೇಕು ಎಂದು ಥಾಮಸ್ ಮೆಕಿ ಬಯಸಿದ್ದರು. ಅಗತಾಳನ್ನು ಈಜು ತರಬೇತಿಗೆ ಸೇರಿಸಿದ್ದರು. ಆದರೆ, ಈಜು ಅವಳಿಗೆ ಹಿಡಿಸಲಿಲ್ಲ. ಗುಂಪು ಕ್ರೀಡೆಯಲ್ಲಿ ಮಕ್ಕಳು ಬೆಳೆಯುವುದಿಲ್ಲ ಎಂದೇ ಥಾಮಸ್ ಮೆಕಿ ನಂಬಿದ್ದರಾದ್ದರಿಂದ ಅಂತಹ ಆಟವನ್ನು ಅಗತಾ ಆಗಲೀ, ಇಗಾ ಆಗಲೀ ಆಡಲು ಸಾಧ್ಯವಾಗಲಿಲ್ಲ. ಅಗತಾ ಟೆನಿಸ್ ಆಟಲಾರಂಭಿಸಿದಳು. 2013ರಲ್ಲಿ ಐಟಿಎಫ್ ಜೂನಿಯರ್ ಸರ್ಕ್ಯೂಟ್‌ನಲ್ಲೂ ಆಡಿದಳು. ಆಮೇಲೆ ಅವಳಿಗೆ ಗಾಯ, ನೋವು ಕಾಡತೊಡಗಿತು.

ಅಕ್ಕನನ್ನು ಸೋಲಿಸಲೆಂದೇ ಟೆನಿಸ್ ರ್‍ಯಾಕೆಟ್ ಹಿಡಿದವಳು ಇಗಾ. ಮೆರಾ ವಾರ್ಸಾದ ಕ್ಲಬ್‌ನಲ್ಲಿ ಮೂಲ ತರಬೇತಿ ಪಡೆದುಕೊಂಡಳು. ವಯಸ್ಸು ಹದಿನಾಲ್ಕು ದಾಟುವ ಹೊತ್ತಿಗೆ ಲೆಗಿಯಾ ವಾರ್ಸಾ ಕ್ಲಬ್‌ನಲ್ಲಿ ತರಬೇತಿ ಪಡೆಯಲಾರಂಭಿಸಿದಳು.

ಜೂನಿಯರ್ ಹಂತದಲ್ಲೇ ವಿಶ್ವದ ಐದನೇ ರ್‍ಯಾಂಕಿಂಗ್‌ನ ಆಟಗಾರ್ತಿ ಎನಿಸಿಕೊಳ್ಳುವ ಮಟ್ಟಕ್ಕೆ ಬೆಳೆದಳು. 2016ರಲ್ಲಿ ಜೂನಿಯರ್ ಗ್ರ್ಯಾನ್ ಸ್ಲ್ಯಾಮ್ ಹಂತ ಪ್ರವೇಶಿಸಿ, ಫ್ರೆಂಚ್ ಓಪನ್‌ನಲ್ಲಿ ಸಿಂಗಲ್ಸ್ ಹಾಗೂ ಡಬಲ್ಸ್ ಎರಡಲ್ಲೂ ಕ್ವಾರ್ಟರ್ ಫೈನಲ್ ಹಂತದವರೆಗೆ ಆಡಿದಳು. 2018ರಲ್ಲಿ ಡಬಲ್ಸ್‌ನಲ್ಲಿ ಅದೇ ಫ್ರೆಂಚ್ ಓಪನ್‌ನಲ್ಲಿ ಚಾಂಪಿಯನ್ ಆದಳು. ಅದು ಅವಳ ಆಟದ ಹಸಿವಿಗೆ ಹಿಡಿದ ಕನ್ನಡಿ.

2020ರಲ್ಲಿ ಫ್ರೆಂಚ್ ಓಪನ್ ಗ್ರ್ಯಾನ್ ಸ್ಲ್ಯಾಮ್‌ನಲ್ಲಿ ಇಗಾ ಚಾಂಪಿಯನ್ ಆದಳು. ಆ ಟೂರ್ನಿಯ ಯಾವ ಪಂದ್ಯದಲ್ಲೂ ಅವಳು ಐದಕ್ಕಿಂತ ಹೆಚ್ಚು ಗೇಮ್‌ಗಳನ್ನು ಸೋತಿರಲಿಲ್ಲ. 2021ರಲ್ಲಿ ಇಟಾಲಿಯನ್ ಓಪನ್ ಗೆದ್ದಾಗ, ಡಬ್ಲ್ಯುಟಿಎ ಹತ್ತನೇ ರ್‍ಯಾಂಕ್ ಒಳಗಿನವರ ಪರಿಧಿಯನ್ನು ಪ್ರವೇಶಿಸಿದಳು.

ಕತಾರ್ ಹಾಗೂ ಇಂಡಿಯನ್ ವೆಲ್ಸ್‌ನಲ್ಲಿ 2022ರಲ್ಲಿ